# ಅಬ್ಬಾ ಅಸ್ಸೆಫಾ




**ಟಿಗಿಸ್ಟ್ ಅಸ್ಸೆಫಾ ಹತ್ತೇ ವರ್ಷಗಳ ಹಿಂದೆ 800 ಮೀಟರ್ ಓಟದಲ್ಲಿ ಸಾಧನೆ ಮಾಡಬೇಕು ಎಂದು ಹೊರಟಿದ್ದವರು. ಆಮೇಲೆ ಅವರಿಗೆ ಆ ಸ್ಪರ್ಧೆ ಅಷ್ಟಾಗಿ ಸ್ಥಳ ಕೊಡದೆ, ಮ್ಯಾರಥಾನ್‌ಗೆ ಹೊರಳಿಕೊಂಡರು. ಕಳೆದ ಒಂದು ವರ್ಷದಲ್ಲಿ ತಮ್ಮ ಜಂಘಾಬಲವನ್ನು ಎಷ್ಟು ಹೆಚ್ಚಿಸಿಕೊಂಡರೆಂದರೆ, ಈಗ ಅವರು ಮ್ಯಾರಥಾನ್ ವಿಶ್ವ ದಾಖಲೆಯ ಒಡತಿ.**

■ **ವಿಶಾಖ ಎನ್.**

ವೇಗ, ಸಹಿಷ್ಣುತೆ, ಶ್ರೇಷ್ಠತೆ ಈ ಮೂರನ್ನೂ ಗುಣವಿಶೇಷಣಗಳೆಂದು ಪರಿಗಣಿಸಿದರೆ, ಅವುಗಳ ಪಕ್ಕ ಎರಡನೇ ಯೋಚನೆಯೇ ಇಲ್ಲದೆ ಟಿಗಿಸ್ಟ್ ಅಸ್ಸೆಫಾ ಅವರ ಹೆಸರನ್ನು ಈಗ ಬರೆದುಬಿಡಬಹುದು. ಸೆಪ್ಟೆಂಬರ್ 24ರಂದು ಬರ್ಲಿನ್ ಮ್ಯಾರಥಾನ್ ಮಹಿಳೆಯರ ವಿಭಾಗದಲ್ಲಿ ಅವರು ಗುರಿಯನ್ನು ಎರಡು ಗಂಟೆ ಹನ್ನೊಂದು ನಿಮಿಷ ಐವತ್ತಮೂರು ಸೆಕೆಂಡ್‌ಗಳಲ್ಲಿ ತಲುಪಿದಾಗ ಕಣ್ಣುಗಳನ್ನು ದೊಡ್ಡದಾಗಿಸಿಕೊಂಡವರೆಷ್ಟೊ. ಎರಡು ನಿಮಿಷ ಹದಿನೈದು ಸೆಕೆಂಡ್‌ನಷ್ಟು ಬೇಗ ಗುರಿ ತಲುಪಿ, ಅವರು ಮಹಿಳೆಯರ ಮ್ಯಾರಥಾನ್‌ನ ವಿಶ್ವದಾಖಲೆಯನ್ನು ಮುರಿದದ್ದು. ಸುಮಾರು 40,400 ರೂಪಾಯಿ ಮೌಲ್ಯದ ಬೂಟನ್ನು ತೊಟ್ಟು ಅವರು ಇದಕ್ಕಾಗಿ ಓಡಿದ್ದು. ಅವರ ಶ್ರಮಕ್ಕೆ ಅಡಿಡಾಸ್ ಕಂಪನಿಯ ಈ ಸೂಪರ್ ಶೂ ಸಾಥ್ ನೀಡಿದ್ದೂ ನಿಜ. 2019ರಲ್ಲಿ ಶಿಕಾಗೊ ಮ್ಯಾರಥಾನ್‌ನಲ್ಲಿ ಕೀನ್ಯಾದ ಬ್ರಿಗಿಡ್ ಕೋಸ್ಗಿ ಎರಡು ಗಂಟೆ ಹದಿನಾಲ್ಕು ನಿಮಿಷ ನಾಲ್ಕು ಸೆಕೆಂಡ್‌ಗಳಲ್ಲಿ ಗುರಿ ತಲುಪಿದ್ದು ಇದುವರೆಗೆ ವಿಶ್ವ ದಾಖಲೆಯಾಗಿ ಉಳಿದಿತ್ತು.

ಇಥಿಯೋಪಿಯಾದ ಅಡ್ಡಿಸ್ ಅಬಾಬಾ ಎಂಬಲ್ಲಿ ಅಸ್ಸೆಫಾ ಹುಟ್ಟಿದ್ದು 1996ರಲ್ಲಿ. ಟಿಗಿಸ್ಟ್ ಅಸ್ಸೆಫಾ ತೆಸ್ಸೆಮಾ ಎನ್ನುವುದು ಜನ್ಮನಾಮ. ಕಳೆದ ವರ್ಷವೂ ಬರ್ಲಿನ್ ಮ್ಯಾರಥಾನ್‌ನಲ್ಲಿ ಅವರೇ ಚಾಂಪಿಯನ್ ಆಗಿದ್ದರು. ಆಗ ಎರಡು ಗಂಟೆ ಹದಿನೈದು ನಿಮಿಷ ಮೂವತ್ತೇಳು ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದ್ದರು. ಅದಕ್ಕೆ ಹೋಲಿಸಿದರೆ, ಈ ವರ್ಷದ ಸಾಧನೆ ‘ಅಬ್ಬಾ’ ಎನಿಸುತ್ತದೆಯಲ್ಲವೆ? ಅದಕ್ಕಿಂತ ಮಜವಾದ ಸಂಗತಿಯೆಂದರೆ, ಬರ್ಲಿನ್ ಮ್ಯಾರಥಾನ್‌ನಲ್ಲಿ ಕಳೆದ ಸಲ ಓಡುವ ಮೊದಲು ಅಸ್ಸೆಫಾ ತಾವು ಪಾಲ್ಗೊಂಡಿದ್ದ ರಿಯಾದ್ ಮ್ಯಾರಥಾನ್ ಅನ್ನು ಪೂರ್ಣಗೊಳಿಸಿದ್ದುದು ಎರಡು ಗಂಟೆ ಮೂವತ್ತನಾಲ್ಕು ನಿಮಿಷ ಒಂದು ಸೆಕೆಂಡ್‌ನಲ್ಲಿ. ಅದು 2022ರ ಮಾರ್ಚ್. ಗಾಯವೊಂದಕ್ಕೆ ಅವರು ಚಿಕಿತ್ಸೆ ಪಡೆದ ಸಂದರ್ಭವೂ ಅದಾಗಿತ್ತು. ಆ ಓಟಕ್ಕೆ ಹೋಲಿಸಿದರೆ